ವಂಚನೆ ಪ್ರಕರಣ ಪತ್ತೆ ಹಚ್ಚುವುದು

78 (214); ಶ್ರೀ ಮಧು ಬಂಗಾರಪ್ಪ ಎಸ್. (ಸೊರಬ)

ಅ) ಸೊರಬ ವಿಧಾನಸಭಾ ಕ್ಷೇತ್ರದ ಸೊರಬ ಪಟ್ಟಣದಲ್ಲಿ ಕಾನಕೇರಿ ರಾಘವೇಂದ್ರ ಬಡಾವಣೆಯ ಮಕ್ಕಾ ಧರ್ಮಸ್ಥಳ ಸ್ವಸಹಾಯ ಸಂಘದಲ್ಲಿ ₹. 01.00 ಲಕ್ಷಗಳ ಸಾಲ ಪಡೆದು ನಾಪತ್ತೆಯಾಗಿರುವ ಪ್ರಕರಣ ದಾಖಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ, ಈ ಬಗ್ಗೆ ಪತ್ತೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು? (ಮಾಹಿತಿ ನೀಡುವುದು)

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸದರಿ ಪ್ರಕರಣದ ಆರೋಪಿಗಳಾದ ಬಿ.ಬಿ. ಬತುಲ್ಲಾ ಮತ್ತು ಇಸ್ಮಾಯಿಲ್ ಸಾಬ್ ಮೇಸ್ತ್ರಿ ಇವರುಗಳು ತಲೆಮರೆಸಿಕೊಂಡಿದ್ದು, ಇವರ ಪತ್ತೆಗಾಗಿ ಎಲ್ಲಾ ರೀತಿಯ ಪ್ರಯತ್ನಗಳನ್ನು ಕೈಗೊಂಡಿದ್ದರೂ ಸಹ ಪತ್ತೆಯಾಗದ ಕಾರಣ ಆರೋಪಿಗಳು ತಲೆ ಮರೆಸಿಕೊಂಡಿರುತ್ತಾರೆಂದು ಇವರ ಮೇಲೆ ವಾರೆಂಟ್ ಹೊರಡಿಸುವಂತೆ ಕೋರಿ ಮಾನ್ಯ ನ್ಯಾಯಾಲಯಕ್ಕೆ ದಿನಾಂಕ 26/5/2014 ರಂದು ದೋಷಾರೋಪಣಾ ಪತ್ರ ಸಲ್ಲಿಸಿದ್ದು, ಹಾಲಿ ಪ್ರಕರಣವು ನ್ಯಾಯಾಲಯದ ಸಿ.ಸಿ. ಸಂಖ್ಯೆ: 12/2015 ರಲ್ಲಿ ವಿಚಾರಣೆಯಲ್ಲಿರುತ್ತದೆ. ಮುಂದಿನ ವಿಚಾರಣೆ ದಿನಾಂಕ: 28/2/2015ಕ್ಕೆ ನಿಗದಿಪಡಿಸಲಾಗಿದೆ.

ಪ್ರಕರಣದ ಪೂರ್ಣ ಮಾಹಿತಿಯನ್ನು **ಅನುಬಂಧದಲ್ಲಿ** ನಮೂದಿಸಿದೆ.

ಅನುಬಂಧ

ಸೊರಬ ವಿಧಾನಸಭಾ ಕ್ಷೇತ್ರದ ಸೊರಬ ಪಟ್ಟಣದಲ್ಲಿ ಕಾನಕೇರಿ ರಾಘವೇಂದ್ರ ಬಡಾವಣೆಯ ಮಕ್ಕಾ ಧರ್ಮಸ್ಥಳ ಸ್ವಸಹಾಯ ಸಂಘದಲ್ಲಿ ₹. 01.00 ಲಕ್ಷಗಳ ಸಾಲ ಪಡೆದು ನಾಪತ್ತೆಯಾಗಿರುವ ಪ್ರಕರಣದ ವಿವರಗಳು ಈ ಕೆಳಕಂಡಂತಿದೆ.

ಈ ಪ್ರಕರಣವು ದಿನಾಂಕ : 22–12–2013 ರಂದು ಸೊರಬದ ಘನ ನ್ಯಾಯಾಲಯದ ಖಾಸಗಿ ದೂರು ಪಿಸಿಆರ್ ನಂ: 109/13 ರಲ್ಲಿನ ನಿರ್ದೇಶನದ ಮೇರೆಗೆ ಸೊರಬ ಠಾಣೆಯಲ್ಲಿ ಗುನ್ನೆ ನಂ. 288/13 ಕಲಂ. 504, 506, 420 ಐಪಿಸಿ ರೀತ್ಯಾ ಪ್ರಕರಣ ದಾಖಲಿಸಲಾಗಿದೆ.

ಪಿರ್ಯದಿಯವರಾದ ಶ್ರೀಮತಿ ಗೌರಮ್ಮ ಕೋಂ ಶಾಂತಪ್ಪ, ಇವರು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದ ಕಾರ್ಯದರ್ಶಿಯಾಗಿದ್ದು ಆರೋಪಿಗಳಾದ ಬಿ.ಬಿ.ಬತುಲ್ಲಾ ವಾಸ ರಾಘವೇಂದ್ರ ಬಡಾವಣೆ ಸೊರಬ ಮತ್ತು ಇಸ್ಮಾಯಿಲ್ ಸಾಬ್ ಮೇಸ್ತ್ರಿ ವಾಸ ರಾಘವೇಂದ್ರ ಬಡಾವಣೆ, ಸೊರಬ ಇವರುಗಳು ಸಂಘದ ಸದಸ್ಯರಾಗಿದ್ದು, ಆರೋಪಿಗಳು ಸಂಘದಿಂದ 90 ಸಾವಿರ ರೂ. ಸಾಲ ಪಡೆದುಕೊಂಡಿದ್ದು ಇದನ್ನು ಪಿರ್ಯಾದಿಯವರು ಆರೋಪಿಗಳ ಮನೆ ಬಳಿ ಸಾಲದ ಹಣ ಕೇಳಲು ಹೋದಾಗ ಪಿರ್ಯಾದಿಗೆ ಹಾಗೂ ಸಂಘದ ಇತರೆ ಸದಸ್ಯರಿಗೆ ಅವಾಚ್ಯ ಶಬ್ದಗಳಿಂದ ಬೈದು ನಮ್ಮ ಮನೆ ಬಾಗಿಲಿಗೆ ಸಾಲದ ಹಣ ಕೇಳಲು ಬಂದರೆ ನಿಮ್ಮನ್ನು ಕತ್ತಿ (ಕಂಡ್ಲಿ)ಯಿಂದ ಕಡಿದು ಕೊಲೆ ಮಾಡುವುದಾಗಿ ಜೀವಬೆದರಿಕೆ ಹಾಕಿ, ಸಂಘದಿಂದ ಸಾಲ ಪಡೆದು ಮೋಸ ವಂಚನೆ ಹಾಗೂ ನಂಬಿಕೆ ದ್ರೋಹವೆಸಗಿರುವುದಾಗಿ ಇದ್ದ ದೂರಿನ ಮೇರೆಗೆ ಸೊರಬ ಠಾಣೆ ಗುನ್ನೆ ನಂ. 288/13 ಕಲಂ. 504, 506, 420 ಐಪಿಸಿ ರೀತ್ಯಾ ಪ್ರಕರಣ ದಾಖಲಿಸಿ, ತನಿಖೆ ಕೈಗೊಳ್ಳಲಾಗಿರುತ್ತದೆ.

ತನಿಖೆಯ ವಿವರ :

ತನಿಖಾ ಕಾಲಕ್ಕೆ ಪ್ರಕರಣದಲ್ಲಿ ದಿನಾಂಕ : 31–01–2014 ರಂದು ಸೊರಬ ಟೌನ್ ರಾಘವೇಂದ್ರ ಬಡಾವಣೆ, ಮನೆ ನಂ.153ರ

ಮುಂಭಾಗದಲ್ಲಿ ಪಂಚನಾಮೆಯನ್ನು ಜರುಗಿಸಿದ್ದು, ಸದರಿ ಪಂಚನಾಮೆ ಕಾಲದಲ್ಲಿ 01. ಶ್ರೀಮತಿ ರೇಣುಕಮ್ಮ ಕೋಂ ಸುರೇಶ್ ಆಚಾರ್ಯ, ವಾಸ ಕಾನಕೇರಿ ಸೊರಬ ಟೌನ್ ಹಾಗೂ 02. ಶ್ರೀಮತಿ ಅಬದುಲ್ಲಾ ಕೋಂ ನಜೀರ್ ಸಾಬ್, ವಾಸ ಕಾನಕೇರಿ ಸೊರಬ ಟೌನ್ ಇವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಲಾಯಿತು.

ನಂತರ ಸಾಕ್ಷಿದಾರರಾದ 01. ಶ್ರೀಮತಿ ಗೀತಾ ಕೋಂ ಕೃಷ್ಣಮೂರ್ತಿ, ವಾಸ ಸೊರಬ ಟೌನ್, 02. ಪೀರ್‌ಸಾಬ್ ಬಿನ್ ಬಾಬು ಸಾಬ್, ವಾಸ ರಾಘವೇಂದ್ರ ಬಡಾವಣೆ, ಸೊರಬ ಟೌನ್, 03. ಜೈತುಂಬಿ ಬಿನ್ ಬಿಂಚಮನ್ ಸಾಬ್, ವಾಸ ರಾಘವೇಂದ್ರ ಬಡಾವಣೆ, ಸೊರಬ ಟೌನ್, 04. ಜುಬೇದಾಬಿ ಕೋಂ ಹಬೀಬುಲ್ಲಾ, ವಾಸ ರಾಘವೇಂದ್ರ ಬಡಾವಣೆ, ಸೊರಬ ಟೌನ್, 05. ರಮೀಜಾಬಿ ಕೋಂ ಸಮೀವುಲ್ಲಾ, ವಾಸ ರಾಘವೇಂದ್ರ ಬಡಾವಣೆ, ಸೊರಬ ಟೌನ್, 06. ಹಫೀಜಾಬಿ ಕೋಂ ಮಹಬೂಬ್ ವಾಸ ರಾಘವೇಂದ್ರ ಬಡಾವಣೆ, ಸೊರಬ ಟೌನ್, 07. ನಗ್ಮಾಬಾನು ಕೋಂ ಸಮೀವುಲ್ಲಾ, ವಾಸ ರಾಘವೇಂದ್ರ ಬಡಾವಣೆ, ಸೊರಬ ಟೌನ್, 08. ಅಪ್ಸರ್ ಬಾನು ಕೋಂ ಹಬೀಬುಲ್ಲಾ ವಾಸ ರಾಘವೇಂದ್ರ ಬಡಾವಣೆ, ಸೊರಬ ಟೌನ್, 09. ಸನೀಮಾಬಿ ಕೋಂ ಬಾಷಾಸಾಬ್, ವಾಸ ರಾಘವೇಂದ್ರ ಬಡಾವಣೆ, ಸೊರಬ ಟೌನ್, 10. ಜರೀನಾಬಿ ಕೋಂ ಗಫೂರ್ ಸಾಬ್. ವಾಸ ರಾಘವೇಂದ್ರ ಬಡಾವಣೆ, ಸೊರಬ ಟೌನ್, 11. ನಾಸಿರಾಬಿ ಕೋಂ ಮದರ್ ಸಾಬ್, ವಾಸ ರಾಘವೇಂದ್ರ ಬಡಾವಣೆ, ಸೊರಬ ಟೌನ್, 12. ನಸೀಮಾ ಬಾನು ಕೋಂ ಬಾಬುಸಾಬ್, ವಾಸ ರಾಘವೇಂದ್ರ ಬಡಾವಣೆ, ಸೊರಬ ಟೌನ್, 13. ಎಂ. ಸತೀಶ್, ಪ್ರೊಜೆಕ್ಟ್ ಆಫೀಸರ್, ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘ, ಸೊರಬ ಇವರುಗಳನ್ನು ವಿಚಾರಣೆ ಮಾಡಿ ಹೇಳಿಕೆ ಪಡೆಯಲಾಗಿರುತ್ತದೆ.

ಆರೋಪಿಗಳಾದ ಬಿ.ಬಿ. ಬತುಲ್ಲಾ ಮತ್ತು ಇಸ್ಮಾಯಿಲ್ ಸಾಬ್ ಮೇಸ್ತ್ರಿ ಇವರುಗಳು ಸಂಘದಿಂದ 90 ಸಾವಿರ ರೂ. ಸಾಲ ಪಡೆದುಕೊಂಡಿದ್ದು, ಪಿರ್ಯಾದಿಯವರು ಆರೋಪಿಗಳ ಮನೆ ಬಳಿ ಸಾಲದ

ಹಣ ಕೇಳಲು ಹೋದಾಗ ಪಿರ್ಯಾದಿಗೆ ಹಾಗೂ ಸಂಘದ ಇತರೆ ಸದಸ್ಯರಿಗೆ ಅವಾಚ್ಯ ಶಬ್ದಗಳಿಂದ ಬೈದು ನಮ್ಮ ಮನೆ ಬಾಗಿಲಿಗೆ ಸಾಲದ ಹಣಕೇಳಲು ಬಂದರೆ ನಿಮ್ಮನ್ನು ಕತ್ತಿ (ಕಂದ್ಲಿ)ಯಿಂದ ಕಡಿದು ಕೊಲೆ ಮಾಡುವುದಾಗಿ ಜೀವಬೆದರಿಕೆ ಹಾಕಿ ಸಂಘದಿಂದ ಸಾಲ ಪಡೆದು ಮೋಸ ವಂಚನೆ ಹಾಗೂ ನಂಬಿಕೆ ದ್ರೋಹವೆಸಗಿರುವುದಾಗಿ ಹೇಳಿಕೆ ನೀಡಿರುತ್ತಾರೆ. ದಿನಾಂಕ: 6–8–14 ರಂದು ಪಿರ್ಯಾದಿದಾರರು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಸದರಿ ದಾಖಲಾತಿಗಳನ್ನು ಸ್ವೀಕರಿಸಿ ಸೊರಬ ಪೊಲೀಸ್ ಠಾಣೆಯಲ್ಲಿ ಅಮಾನತ್ತು ಪಂಚನಾಮೆಯನ್ನು ಜರುಗಿಸಿದ್ದು, ಸದರಿ ಪಂಚನಾಮೆ ಕಾಲದಲ್ಲಿ ಪಂಚರಾಗಿ 01. ಶ್ರೀಮತಿ ರೇಣುಕಮ್ಮ ಕೋಂ ಸುರೇಶ್ ಆಚಾರ್ಯ, ವಾಸ ಕಾನಕೇರಿ ಸೊರಬ ಟೌನ್ 02. ಶ್ರೀಮತಿ ಅಬದುಲ್ಲಾ ಕೋಂ ನಜೀರ್ ಸಾಬ್, ವಾಸ ಕಾನಕೇರಿ ಸೊರಬ ಟೌನ್ ಇವರು ಹಾಜರಿದ್ದು, ಸದರಿಯವರುಗಳ ಸಮಕ್ಷಮ ಈ ಕೆಳಕಂಡ ದಾಖಲಾತಿಗಳನ್ನು ಅಮಾನತ್ತುಪಡಿಸಿದೆ.

01. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಗುಂಪಿನ ನೋಂದಣಿ ಅರ್ಜಿ.
02. ಪ್ರತಿನಿಧಿ ಅರ್ಜಿ ಹಾಗೂ ಕರಾರು ಪತ್ರ.
03. ಒಕ್ಕೂಟದ ಉಪಸಮಿತಿಯ ಮತ್ತು ಮೇಲ್ವಿಚಾರಕರ ಮಂಜೂರಾತಿ ಪತ್ರ.
04. ಎಲ್ಐಸಿ ಬಾಂಡ್ ಪತ್ರ.
05. ಇಂಡಿವಿಸಲ್ ಸ್ಟೇಟಸ್ ರಿಪೋರ್ಟ್– ಇವುಗಳನ್ನು ಅಮಾನತ್ತುಪಡಿಸಿಕೊಂಡು ಪಿಎಫ್ ನಂ.95/14ರಲ್ಲಿ ನೊಂದಾಯಿಸಿದೆ.

ಪ್ರಕರಣದ ಆರೋಪಿಗಳು ಬಿ.ಬಿ. ಬತುಲ್ಲಾ ಮತ್ತು ಇಸ್ಮಾಯಿಲ್ ಸಾಬ್ ಮೇಸ್ತ್ರಿ ಇವರುಗಳು ತಲೆಮರೆಸಿಕೊಂಡಿದ್ದು, ಇವರ ಪತ್ತೆಗಾಗಿ ಪಿಎಸ್ಐ ರವರು ದಿನಾಂಕ : 31.01.2014, 08.03.2014, 06.04.2014ರಂದು ಸೊರಬ ಟೌನ್, ಕೊಡಕಣಿ, ಕಪ್ಪಗಳಲೆ, ಮರೂರು

ಮುಂತಾದ ಕಡೆಗಳಲ್ಲಿ ಹೋಗಿ ಪತ್ತೆ ಕಾರ್ಯ ನಡೆಸಿದ್ದರಲ್ಲಿ, ಆರೋಪಿಗಳು ಪತ್ತೆಯಾಗಿರುವುದಿಲ್ಲ.

ಆರೋಪಿಗಳ ಪತ್ತೆಗೆ ಎಲ್ಲಾ ರೀತಿಯ ಪ್ರಯತ್ನ ಕೈಗೊಂಡಾಗ್ಯೂ ಸಹ ಪತ್ತೆಯಾಗದ ಕಾರಣ ಆರೋಪಿಗಳು ತಲೆಮರೆಸಿಕೊಂಡಿರುತ್ತಾರೆಂದು, ಇವರ ಮೇಲೆ ವಾರೆಂಟ್ ಹೊರಡಿಸುವಂತೆ ಕೋರಿ, ಘನ ನ್ಯಾಯಾಲಯಕ್ಕೆ ದಿನಾಂಕ : 26-05-2014 ರಂದು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದು, ಈ ಪ್ರಕರಣವು ಸಿಸಿ ನಂ. 12/2015 ರಲ್ಲಿ ವಿಚಾರಣೆ ನಡೆಯುತ್ತಿದ್ದು, ದಿನಾಂಕ : 28-02-2015 ಕ್ಕೆ ಮುದ್ದತ್ತು ದಿನಾಂಕ ನಿಗದಿಪಡಿಸಲಾಗಿರುತ್ತದೆ.

ಚಂದ್ರಗುತ್ತಿ ಗ್ರಾಮದ ಶ್ರೀ ರೇಣುಕಾಂಬ ದೇವಸ್ಥಾನದಲ್ಲಿ ಮೂಲಭೂತ ಸೌಲಭ್ಯ ಕಲ್ಪಿಸುವುದು

79 (215); ಶ್ರೀ ಮಧು ಬಂಗಾರಪ್ಪ ಎಸ್.

ಅ) ಸೊರಬ ವಿಧಾನಸಭಾ ಕ್ಷೇತ್ರದ ಸೊರಬ ತಾಲ್ಲೂಕಿನಲ್ಲಿ ಚಂದ್ರಗುತ್ತಿ ಗ್ರಾಮದ ಜಗತ್ ಪ್ರಸಿದ್ಧ ಶ್ರೀ ರೇಣುಕಾಂಬ ದೇವಸ್ಥಾನಕ್ಕೆ ಆಗಮಿಸುವ ಭಕ್ತಾಧಿಗಳಿಗೆ ಸರತಿ ಸಾಲಿನಲ್ಲಿ ಬಂದು ದರ್ಶನ ಪಡೆಯುವ ವ್ಯವಸ್ಥೆ ಇಲ್ಲದಿರುವುದು ಹಾಗೂ ಸೂಕ್ತ ಭದ್ರತಾ ವ್ಯವಸ್ಥೆ ಮತ್ತು ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಶೌಚಾಲಯ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಮೇಲ್ಕಂಡ ಸೌಲಭ್ಯಗಳನ್ನು ವ್ಯವಸ್ಥೆಗೊಳಿಸಲು ಸರ್ಕಾರವು ಏನಾದರೂ ಯೋಜನೆಯನ್ನು ರೂಪಿಸಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳ ವಿವರಣೆ ನೀಡುವುದು?